

# ವಿದ್ಯಾ ಬೇಸರ

ವಿದ್ಯಾ ಬಾಲನ್ ತಾಯಿಯಾಗುತ್ತಿದ್ದಾರಂತೆ! ಹೀಗಂತ ಬಿಟೌನಿನಲ್ಲಿ ಸುದ್ದಿಗಳು ಹರಡತೊಡಗಿ ತಿಂಗಳುಗಳೇ ಉರುಳಿವೆ. ವಿದ್ಯಾ ಹೊರ ಜಗತ್ತಿಗೆ ಕಾಣಿಸಿಕೊಳ್ಳದೇ ಇದ್ದಾಗ, ಆರೋಗ್ಯದಲ್ಲಿ ಏರುಪೇರಾದಾಗ ಅವರು ಗರ್ಭಿಣಿಯಾಗಿದ್ದಾರೆ ಎಂಬ ಸುದ್ದಿ ಹೊಗೆಯಾಡತೊಡಗುತ್ತದೆ. ಇತ್ತೀಚೆಗೆ ಫ್ಲೋರಿಡಾದಲ್ಲಿ ನಡೆದ ಐಐಎಫ್‌ಎ ಪ್ರಶಸ್ತಿ ಕಾರ್ಯಕ್ರಮದ ರಾಯಭಾರಿಯಾಗಿದ್ದರೂ ಅದಕ್ಕೆ ಹಾಜರಾಗಿರಲಿಲ್ಲ. ಅಲ್ಲದೆ ಕೆಲ ಮಹತ್ವದ ಸಿನಿಮಾಗಳನ್ನು ಒಲ್ಲೆ ಎಂದಿದ್ದರು. ಇಷ್ಟು ಸಾಕಲ್ಲವೇ ವಿದ್ಯಾ ಬಗ್ಗೆ ಗಾಸಿಪ್ ಹರಡಲು? ಆದರೆ ತಮ್ಮ ಕುರಿತ ಈ ಬಗೆಯ ಗಾಳಿ ಸುದ್ದಿಗಳು ವಿದ್ಯಾರಿಗೆ ಬೇಸರ ತರಿಸಿದೆಯಂತೆ. 'ಮಗು ಬೇಕೆನಿಸುವುದು ನಿಜ. ಆದರೆ ಇಷ್ಟು ಬೇಗ ಅಲ್ಲ. ನಾನಿನ್ನೂ ತಾಯ್ತನಕ್ಕೆ ಮಾನಸಿಕವಾಗಿ ಸಿದ್ಧಳಾಗಿಲ್ಲ. ಮತ್ತೊಂದು ಜೀವದ ಜವಾಬ್ದಾರಿಯನ್ನು ಪಡೆದುಕೊಳ್ಳುವ ಪ್ರಕ್ರಿಯೆ ಅಷ್ಟು ಸುಲಭವಲ್ಲ' ಎಂದಿದ್ದಾರೆ ವಿದ್ಯಾ. 'ಇತ್ತೀಚಿನ ದಿನಗಳಲ್ಲಿ ಜನರು ಮಾತನಾಡುವಾಗ ನನ್ನ ಉದರದತ್ತ ದೃಷ್ಟಿ ನೆಟ್ಟಿರುತ್ತಾರೆ. ಈ ಕ್ಷೇತ್ರದಲ್ಲಿ ನಟರು ಮತ್ತು ನಟಿಯರನ್ನೇಕೆ ಹೀಗೆ ವಿಭಿನ್ನವಾಗಿ ನೋಡುತ್ತಾರೆ? ಈ ರೂಮರ್‌ಗಳಿಂದ ಸಾಕಾಗಿ ಹೋಗಿದೆ' ಎಂದು ಅಳಲು ತೋಡಿಕೊಂಡಿದ್ದಾರೆ ಅವರು. ಗ್ಲಾಮರ್ ಜಗತ್ತಿನಿಂದ ವಿದ್ಯಾ ಇನ್ನು ಮುಂದೆ ದೂರ ಎಂದು ಹೇಳುತ್ತಿದ್ದವರಿಗೆ, ಅದಕ್ಕಾಗಿ ಇನ್ನೂ ಹಲವು ಕಾಲ ಕಾಯಬೇಕು ಎಂಬ ಸೂಚನೆ ನೀಡಿದ್ದಾರೆ ವಿದ್ಯಾ.

## ಹಳೆ ಗೆಳತಿ ನಕ್ಕರೆ?

ಶಾಹಿದ್ ಕಪೂರ್ ಇಂಥದ್ದೊಂದು ಗಳಿಗೆಯನ್ನು ನಿರೀಕ್ಷಿಸಿರಲಿಲ್ಲವೆನಿಸುತ್ತದೆ. ಹೀಗೆ ಶಾಕ್ ಕೊಡಬೇಕು ಎಂಬ ಉದ್ದೇಶ ಕರೀನಾರಲ್ಲಿಯೂ ಇರದಿರಬಹುದು. 2007ರಲ್ಲಿ ಬ್ರೇಕ್‌ಅಪ್ ಆದ ಬಳಿಕ ಈ ಮಾಜಿ ಪ್ರೇಮಿಗಳು ಪರಸ್ಪರ ಕಣ್ಣು ಕಣ್ಣು ಮಿಲಾಯಿಸಿರಲಿಲ್ಲ. ಎದುರಾದಾಗ ಮುಖ ನೋಡಲೂ ಇಷ್ಟಪಡುತ್ತಿರಲಿಲ್ಲ. ಒಬ್ಬರು ಇದ್ದಲ್ಲಿ ಇನ್ನೊಬ್ಬರು ಇರುತ್ತಿರಲಿಲ್ಲ. ಆದರೆ 2014 ಬಿಟೌನಿನ ತೇಪೆಗಳ ಪರ್ವಕಾಲವಾಗಿ ಮಾರ್ಪಟ್ಟಂತಿದೆ. ಅನೇಕ ಹಳೆ ಜೋಡಿಗಳು ವೈಷಮ್ಯ ಮರೆತು ಆಲಂಗಿಸಿಕೊಂಡದಕ್ಕೆ ಸಾಕ್ಷಿ ಈ ವರ್ಷ. ಅದಕ್ಕೆ ಶಾಹಿದ್ ಮತ್ತು ಕರೀನಾ ಜೋಡಿಯೂ ಸೇರಿಕೊಂಡಿದೆ. ಐಐಎಫ್‌ಎ ಕಾರ್ಯಕ್ರಮವನ್ನು ಶಾಹಿದ್, ಫರ್ಹಾನ್ ಅಖ್ತರ್ ಇಬ್ಬರೂ ನಡೆಸಿಕೊಡುತ್ತಿದ್ದರು. ಪ್ರಶಸ್ತಿ ಕೊಡುವ ಸಲುವಾಗಿ ಪತಿ ಸೈಫ್ ಅಲಿ ಖಾನ್ ಜೊತೆ ವೇದಿಕೆ ಏರಿದ ಬೆಬೋ, ಶಾಹಿದ್‌ರತ್ತ ತಿರುಗಿ 'ಹಾಯ್' ಎಂದರಂತೆ. ಜೊತೆಗೆ ನಿರೂಪಣೆ ಮಾಡುತ್ತಿದ್ದಿಬ್ಬರನ್ನೂ ಮನಸಾರೆ ಅಭಿನಂದಿಸಿದರು. ಪಕ್ಕದಲ್ಲಿದ್ದ ಸೈಫ್ ಸಹ ಮುಗುಳ್ನಕ್ಕರು. ಆದರೆ ಕರೀನಾರ 'ಹಾಯ್' ಕೇಳಿ ಶಾಹಿದ್ ಅರೆಕ್ಷಣ ಮೂಕರಾಗಿದ್ದರಂತೆ. ಅವರಿಬ್ಬರೂ ವೇದಿಕೆಯಿಂದ ಇಳಿದ ಬಳಿಕ ಫರ್ಹಾನ್ ಕಡೆ ತಿರುಗಿ 'ಆಕೆ ನನಗೇ ಹಾಯ್ ಎಂದಿದ್ದೇ' ಎಂದು ಪ್ರಶ್ನಿಸಿದರಂತೆ ಶಾಹಿದ್. ಸದ್ಯಕ್ಕೆ ಬಾಲಿವುಡ್‌ನ ಗಲ್ಲಿಗಳಲ್ಲಿ ಶಾಹಿದ್‌ರನ್ನು ಕರೀನಾ ಮಾತನಾಡಿಸಿದ್ದೇ ಸುದ್ದಿ. ಹಳೆ ಗೆಳತಿಯ ಹೊಸ ನಗು ತಂದಿತ್ತ ಆಘಾತದಿಂದ ಶಾಹಿದ್ ಇನ್ನೂ ಹೊರಬಂದಿಲ್ಲ. ಆದರೆ ಬೇಗಂ ಮಾತ್ರ ಎಲ್ಲವನ್ನೂ ಮರೆತವರಂತೆ ತೋರಿಸಿಕೊಳ್ಳುತ್ತಿದ್ದಾರೆ. ಕರೀನಾರ ಹೊಸ ನಡೆಗೆ ಕಾರಣ ಏನೆಂದು ಆಕೆಯ ಪತಿರಾಯನನ್ನೇ ಕೇಳಬೇಕು!

■ ಅಮಿ

